# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ | : | 1526 |
| ಸದಸ್ಯರ ಹೆಸರು | : | ಶ್ರೀ ಹೆಚ್. ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 17.03.2026 |
| ಉತ್ತರಿಸುವ ಸಚಿವರು | : | ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ವಲಯ ಉದ್ಯಮಗಳ ಸಚಿವರು. |

<table>
<tr><th>ಕ್ರ. ಸಂ.</th><th>ಪ್ರಶ್ನೆಗಳು</th><th>ಉತ್ತರ</th></tr>
<tr>
<td>ಅ)</td>
<td>ಕಳೆದ ಮೂರು ವರ್ಷಗಳಲ್ಲಿ ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿ ಎಷ್ಟು ಸಣ್ಣ ಕೈಗಾರಿಕೆಗಳನ್ನು ಪ್ರಾರಂಭಿಸಲಾಗಿದೆ; ಹಾಗೂ ಎಷ್ಟು ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ; (ವಿವರ ಒದಗಿಸುವುದು)</td>
<td>
ರಾಜ್ಯದಲ್ಲಿ ಜುಲೈ 2020 ರಿಂದ ಎಂ.ಎಸ್.ಎಂ.ಇ ಉದ್ಯಮಗಳ ನೊಂದಣಿಯನ್ನು ಭಾರತ ಸರ್ಕಾರದ ಉದ್ಯಮ್ ತಂತ್ರಾಂಶದಲ್ಲಿ ಮಾಡಲಾಗುತ್ತಿದ್ದು, ಕಳೆದ 03 ವರ್ಷಗಳಲ್ಲಿ ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ನೋಂದಣಿಯಾಗಿರುವ ಎಂ.ಎಸ್.ಎಂ.ಇ ಉದ್ಯಮಗಳ ವಿವರಗಳು ಕೆಳಕಂಡಂತಿವೆ:
ಬೆಂಗಳೂರು ನಗರ ಜಿಲ್ಲೆ:
<table>
<tr><th>ಎಂಎಸ್ಎಂಇ ವರ್ಗೀಕರಣ</th><th>2022-23</th><th>2023-24</th><th>2024-25</th><th>2025-26 (ಜನವರಿ ಅಂತ್ಯಕ್ಕೆ)</th></tr>
<tr><td>ಸೂಕ್ಷ್ಮ</td><td>98,176</td><td>1,20,752</td><td>1,44,321</td><td>127860</td></tr>
<tr><td>ಸಣ್ಣ</td><td>2,171</td><td>1,509</td><td>924</td><td>484</td></tr>
<tr><td>ಮಧ್ಯಮ</td><td>155</td><td>81</td><td>62</td><td>74</td></tr>
<tr><td>ಒಟ್ಟು</td><td>1,00,502</td><td>1,22,342</td><td>1,45,307</td><td>128418</td></tr>
</table>
ಬೆಂಗಳೂರು ಗ್ರಾಮಾಂತರ ಜಿಲ್ಲೆ:
<table>
<tr><th>ಎಂಎಸ್ಎಂಇ ವರ್ಗೀಕರಣ</th><th>2022-23</th><th>2023-24</th><th>2024-25</th><th>2025-26 (ಜನವರಿ ಅಂತ್ಯಕ್ಕೆ)</th></tr>
<tr><td>ಸೂಕ್ಷ್ಮ</td><td>20,406</td><td>23,157</td><td>26,151</td><td>22696</td></tr>
<tr><td>ಸಣ್ಣ</td><td>259</td><td>127</td><td>67</td><td>49</td></tr>
<tr><td>ಮಧ್ಯಮ</td><td>14</td><td>9</td><td>6</td><td>6</td></tr>
<tr><td>ಒಟ್ಟು</td><td>20,679</td><td>23,293</td><td>26,224</td><td>22751</td></tr>
</table>
ಬೆಂಗಳೂರು ನಗರ: - ಯೋಜನಾ ವೆಚ್ಚ ರೂ. 15 ಕೋಟಿಗಳಿಗಿಂತ ಕಡಿಮೆ ಹಾಗೂ 2 ಎಕರೆ ಒಳಗಿನ ವಿಸ್ತೀರ್ಣದ ಘಟಕಗಳಿಗೆ ಕಳೆದ ಮೂರು ವರ್ಷಗಳಲ್ಲಿ ಜಿಲ್ಲಾ ಮಟ್ಟದ ಏಕ ಗವಾಕ್ಷಿ ಸಮಿತಿ ಸಭೆಯಲ್ಲಿ ಅನುಮೋದನೆಯಾದಂತೆ ಒಟ್ಟು 21 ಘಟಕಗಳಿಗೆ ನಿವೇಶನಗಳು ಹಂಚಿಕೆಯಾಗಿವೆ.
ಬೆಂಗಳೂರು ಗ್ರಾಮಾಂತರ: ಕಳೆದ 03 ವರ್ಷಗಳಲ್ಲಿ 143 ಸಣ್ಣ ಕೈಗಾರಿಕಾ ಯೋಜನೆಗಳಿಗೆ ಜಿಲ್ಲಾ ಮಟ್ಟದ ಸಮಿತಿಯಲ್ಲಿ ಅನುಮೋದನೆ ನೀಡಲಾಗಿರುತ್ತದೆ.
</td>
</tr>
</table>

**ಆ)** ಬೆಂಗಳೂರು ನಗರ ಜಿಲ್ಲೆಗಳಲ್ಲಿ ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೆ ಯಾವುದಾದರೂ ಯೋಜನೆಯನ್ನು ಕೈಗೊಳ್ಳಲಾಗಿದೆಯೇ; ಇಲ್ಲದಿದ್ದಲ್ಲಿ, ಯೋಜನೆಗಳನ್ನು ಕೈಗೊಳ್ಳುವ ಪ್ರಸ್ತಾವ ಸರ್ಕಾರದ ಮುಂದಿದೆಯೇ; (ವಿವರ ನೀಡುವುದು)

ಸರ್ಕಾರವು ನೂತನ ಕೈಗಾರಿಕಾ ನೀತಿ 2025-30 ನ್ನು ಜಾರಿಗೆ ತಂದಿದ್ದು, ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳನ್ನು ವಲಯ-3 ರಲ್ಲಿ ಅಳವಡಿಸಲಾಗಿರುತ್ತದೆ, ಪ್ರಸ್ತುತ ರಾಜ್ಯದಲ್ಲಿ ಕೈಗಾರಿಕಾ ನೀತಿ 2025-30 ರಡಿಯಲ್ಲಿ ಲಭ್ಯವಿರುವ ಈ ಕೆಳಕಂಡ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ಕಲ್ಪಿಸಲಾಗಿರುತ್ತದೆ.

1. ಬಂಡವಾಳ ಹೂಡಿಕೆ ಸಹಾಯಧನ/ ವಹಿವಾಟು ಆಧಾರಿತ ಹೂಡಿಕೆ ಸಹಾಯಧನ.
2. ಮುದ್ರಾಂಕ ಶುಲ್ಕ ವಿನಾಯಿತಿ ಹಾಗೂ ನೋಂದಣೆ ಶುಲ್ಕ ರಿಯಾಯಿತಿ.
3. ಭೂ ಪರಿವರ್ತನಾ ಶುಲ್ಕ ಮರುಪಾವತಿ.
4. ವಿದ್ಯುತ್ ಶುಲ್ಕದ ಮೇಲಿನ ತೆರಿಗೆ ವಿನಾಯಿತಿ.
5. ವಿದ್ಯುತ್ ಚ್ಛಕ್ತಿ ಸಹಾಯಧನ.
6. ತಂತ್ರಜ್ಞಾನ ಅಳವಡಿಕೆ & ನವೋನ್ವೇಶಣೆ ಉತ್ತೇಜನ
7. ರಫ್ತು ಘಟಕಗಳಿಗೆ ಪ್ರೋತ್ಸಾಹ.
8. ಸುಸ್ಥಿರತೆ ಮತ್ತು ಜವಾಬ್ದಾರಿಯುತ ಕೈಗಾರಿಕೀಕರಣ ಉತ್ತೇಜನ
9. ಲಾಜಿಸ್ಟಿಕ್ಸ್ ಮತ್ತು ಉಗ್ರಾಣ ಸಹಾಯಧನ

**ಇ)** ಈಗಾಗಲೇ ಕಳೆದ 3 ವರ್ಷಗಳಲ್ಲಿ ಸ್ಥಾಪಿಸಲಾಗಿರುವ ಸಣ್ಣ ಕೈಗಾರಿಕೆಗಳಿಗೆ ಸರ್ಕಾರದಿಂದ ಎಷ್ಟು ಸಹಾಯಧನ ನೀಡಲಾಗಿದೆ? (ವಿವರ ನೀಡುವುದು)

ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಈಗಾಗಲೇ ಸ್ಥಾಪಿಸಲಾಗಿರುವ ಸಣ್ಣ ಕೈಗಾರಿಕೆಗಳಿಗೆ ಈ ಕೆಳಕಂಡಂತೆ ಮೂರು ವರ್ಷಗಳಲ್ಲಿ ಸರ್ಕಾರದಿಂದ ಸಹಾಯಧನ ಬಿಡುಗಡೆ ಮಾಡಲಾಗಿದೆ. ವಿವರಗಳನ್ನು **ಅನುಬಂಧ** ದಲ್ಲಿ ನೀಡಲಾಗಿದೆ.

| ವರ್ಷ | ಬೆಂಗಳೂರು ಗ್ರಾಮಾಂತರ ಜಿಲ್ಲೆ | | ಬೆಂಗಳೂರು ನಗರ ಜಿಲ್ಲೆ | |
|---|---|---|---|---|
| | ಘಟಕಗಳ ಸಂಖ್ಯೆ | ಮಂಜೂರಾದ ಸಹಾಯಧನ (ರೂ.ಗಳಲ್ಲಿ) | ಘಟಕಗಳ ಸಂಖ್ಯೆ | ಮಂಜೂರಾದ ಸಹಾಯಧನ (ರೂ.ಗಳಲ್ಲಿ) |
| 2022-23 | 2 | 10,51,000 | 6 | 25,31,560 |
| 2023-24 | - | - | 5 | 38,16,600 |
| 2024-25 | 2 | 29,68,000 | 4 | 25,36,771 |
| **ಒಟ್ಟು** | **4** | **40,19,000** | **15** | **88,84,931** |

ಸಿಐ 89 ಸಿಎಸ್‌ಸಿ 2026

(ಶರಣಬಸಪ್ಪ ದರ್ಶನಾಪೂರ)
ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ವಲಯ ಉದ್ಯಮಗಳ
ಸಚಿವರು.